ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 671/2021

(ಪ್ರಾಸಾ-7 ಚಾಸಾ-21 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 08.12.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರದೀಪ್ |
| ತಂದೆಯ ಹೆಸರು | - | ವೆಂಕಟೇಶ್ |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಆಟೋ ಚಾಲಕ |
| ವಾಸ | - | ಹುಸ್ಕೂರು ಗ್ರಾಮ, ಆನೇಕಲ್ ಹೋಬಳಿ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಮೃತ ರವಿಕುಮಾರ್ ಮತ್ತು ಮೃತ ಚಂದನ್ ಕುಮಾರ್ ನನಗೆ ಗೊತ್ತು. ದಿಃ31.08.2021 ರಂದು ಅವರಿಬ್ಬರ ಕೊಲೆ ಆಗಿತ್ತು. ದಿಃ01.09.2021 ರಂದು ನನಗೆ ಅವರಿಬ್ಬರ ಕೊಲೆ ಆಗಿದ್ದು ತಿಳಿದುಬಂದಿದ್ದು ನಾನು ರವಿಕುಮಾರ್ ಇವರ ಮನೆಯ ಹೋಗಿ ಮೃತ ದೇಹವನ್ನು ನೋಡಿರುತ್ತೇನೆ. ದಿಃ31.08.2021 ರಂದು ರಾತ್ರಿ 07.15 ಘಂಟೆ ಸಮಯದಲ್ಲಿ ನಾನು ಮತ್ತು ಚಾಸಾ-20 ರವರು ಹೀಲಳಿ ರಸ್ತೆಯಲ್ಲಿರುವ ಗಣೇಶ್ ಬಾರ್ ಆಂಡ್ ರೆಸ್ಟೋರೆಂಟ್ ಬಳಿ ಇರುವ ಚಿಕನ್ ಅಂಗಡಿ ಬಳಿ ನಿಂತಿದ್ದಾಗ ರವಿಕುಮಾರ್ ಮತ್ತು ಆತನ ಸ್ನೇಹಿತ ಚಂದನ್ ಹಾಗೂ 1 ನೇ ಆರೋಪಿ ಖರೀಂ ರವರು ಸದರಿ ಬಾರಿನಲ್ಲಿ ಡ್ರಿಂಕ್ಸ್ ಮಾಡಿಕೊಂಡು ಬಂದು ನನ್ನನ್ನು ಮಾತನಾಡಿಸಿ ಪಲ್ಸರ್ ಮತ್ತು ಅಪಾಚಿ ಬೈಕ್ ಗಳಲ್ಲಿ ಅವರು ಹೋಗಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ವಿಸಿ ಮೂಲಕ ಹಾಜರುಪಡಿಸಿದ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

2. ದಿಃ02.09.2021 ರಂದು ಗಣೇಶ್ ಬಾರ್ ಆಂಡ್ ರೆಸ್ಟೋರೆಂಟ್ ಮುಂಭಾಗದಲ್ಲಿ ಪೋಲಿಸರು ಬಂದಿದ್ದು ತನಿಖೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆಗ ಚಾಸಾ-20 ರವರು

ಸಹ ಹಾಜರಿದ್ದು ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ಪೋಲಿಸರು ಫೋಟೋಗಳನ್ನು ತೆಗೆದು ವಿಡಿಯೋ ಮಾಡಿಕೊಂಡಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-11 ಎಂದು ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

3. ಗಣೇಶ್ ಬಾರ್ ಆಂಡ್ ರೆಸ್ಟೋರೆಂಟ್ ಬಳಿ ಮೃತರನ್ನು ಮತ್ತು ಖರೀಂನನ್ನು ನೋಡಿದ ಬಗ್ಗೆ ಪೋಲಿಸರು ವಿಚಾರಣೆ ಮಾಡಿದಾಗ ನಾನು ಹೇಳಿರುತ್ತೇನೆ. ಮೃತರು ಮತ್ತು 1 ನೇ ಆರೋಪಿ ಹೋದ ಬೈಕ್ ಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ದಿಃ31.08.2021 ರಂದು ನಾನು ಮತ್ತು ಚಾಸಾ-20 ರವರು ಹೀಲಳಿ ರಸ್ತೆಯಲ್ಲಿರುವ ಗಣೇಶ್ ಬಾರ್ ಆಂಡ್ ರೆಸ್ಟೋರೆಂಟ್ ಬಳಿ ಇರುವ ಚಿಕನ್ ಅಂಗಡಿ ಬಳಿ ನಿಂತಿದ್ದಾಗ ರಾತ್ರಿ 07.45 ಘಂಟೆ ಸಮಯದಲ್ಲಿ ರವಿಕುಮಾರ್ ಮತ್ತು ಆತನ ಸ್ನೇಹಿತ ಚಂದನ್ ಹಾಗೂ 1 ನೇ ಆರೋಪಿ ಖರೀಂ ರವರು ಸದರಿ ಬಾರಿನಲ್ಲಿ ಡ್ರಿಂಕ್ಸ್ ಮಾಡಿಕೊಂಡು ಬಂದು ನನ್ನನ್ನು ಮಾತನಾಡಿಸಿ ಪಲ್ಸರ್ ಮತ್ತು ಅಪಾಚಿ ಬೈಕ್ ಗಳಲ್ಲಿ ಅವರು ಹೋಗಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ</u> <u>ಆರೋಪಿತರ ಪರ ಶ್ರೀ ವಿ ಪಿ ವಕೀಲರಿಂದಃ</u>**

5. ಮೃತ ರವಿಕುಮಾರ್ ನನಗೆ ಕಳೆದ 20 ವರ್ಷಗಳಿಂದ ಗೊತ್ತು. ಮೃತ ಚಂದನ್ ಕುಮಾರ್ ಇವರು ಮೃತ ರವಿಕುಮಾರ್ ಇವರ ಸ್ನೇಹಿತರಾಗಿದ್ದುದ್ದರಿಂದ ಘಟನೆಗಿಂತ ಒಂದು ವರ್ಷದಿಂದ ಗೊತ್ತಿತ್ತು. ಮೃತ ರವಿಕುಮಾರ್ ಇವರ ಅಣ್ಣನಾದ ಮಂಜುನಾಥ

ಇವರು ತನ್ನ ತಮ್ಮ ರವಿಕುಮಾರ್ ಕೊಲೆಯಾಗಿದ್ದು ಠಾಣೆಗೆ ತಮ್ಮಜೊತೆ ಹೋಗಲು ಬಾ ಎಂದು ಫೋನ್ ಮುಖಾಂತರ ಹೇಳಿದಾಗ ಕೊಲೆಯಾದ ವಿಚಾರ ನನಗೆ ಗೊತ್ತಾಯಿತು. ಹೆಬ್ಬಗೋಡಿ ಪೋಲಿಸ್ ಠಾಣೆಯಲ್ಲಿ ನಾನು ಎರಡು ಮೃತ ದೇಹಗಳನ್ನು ನೋಡಿದೆನು. ದಿಃ31.08.2021 ರಂದು ನಾನು ಚಿಕನ್ ತರಲು ಗಣೇಶ್ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಇರುವ ಚಿಕನ್ ಅಂಗಡಿಗೆ ಹೋಗಿದ್ದೆನು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಃ31.08.2021 ರಂದು ಇಬ್ಬರು ಮೃತರು ಹಾಗೂ 1 ನೇ ಆರೋಪಿಯು ಗಣೇಶ್ ಬಾರ್ ಅಂಡ್ ರೆಸ್ಟೋರಿಂಟಿನಿಂದ ಎರಡು ಬೈಕ್ ಗಳಲ್ಲಿ ಹೊರಟು ಹೋಗಿದ್ದನ್ನು ನಾನು ನೋಡದೇ ಇದ್ದರೂ ಸಹ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಎರಡು ಬೈಕ್ ಗಳ ನೊಂದಣಿ ಸಂಖ್ಯೆ ಹೇಳಲು ನನಗೆ ಬರುವುದಿಲ್ಲ. ಸದರಿ ಪಲ್ಸರ್ ಬೈಕ್ ಕಪ್ಪು ಬಣ್ಣದ್ದಾಗಿದ್ದು ಇನ್ನೊಂದು ಬೈಕ್ ಯಾವ ಬಣ್ಣದ್ದು ಎಂದು ನಾನು ಗಮನಿಸಲಿಲ್ಲ.

6. ದಿಃ02.09.2021 ರಂದು ಪಂಚನಾಮೆ ಮಾಡಲು ನನಗೆ ಪೋಲಿಸರು ಲಿಖಿತ ನೋಟೀಸ್ ನೀಡಿಲ್ಲ. ನಿಪಿ-11 ಪಂಚನಾಮೆಗೆ ನಾನು ಸಹಿಯನ್ನು ಸ್ಥಳದಲ್ಲಿ ಹಾಕಿರದೇ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಮೃತ ರವಿಕುಮಾರ್ ನನ್ನ ಸ್ನೇಹಿತನಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು